ಗಂಡ್ಸು ಗಡ್ಸಂಗೆ ಇರ್ಬೇಕು. ಅವಂಗ್ಯಾಕೆ ಇಂಗೆಲ್ಲ ಮಾಡ್ಕೊಳ್ಳೊ ಹಣೆಬರಾ. ಅವ್ನು ಕೇಳ್ದಾ ಅಂತ ಲಂಗ ಆಕೀ, ಹುವ್ವ ಮುಡ್ಸಿ ಬಳೆ ತೊಡ್ಸಿ ಬುಡೋದಾ... ಇಷ್ಟು ದೊಡ್ಡಾಗಿ ಬೆಳ್ದವೆ, ಆಟೂ ಗೊತ್ತಾಗಕಿಲ್ವಾ, ಏನು ಹೆಣ್ಮಕ್ಳೊ ಇವು... ಇವು ಇರೋದೇ ಮನೆ ತುಂಬಾ ಸಾಕಾಗಕಿಲ್ವಾ, ಇವ್ನು ಒಬ್ಬ ಇದ್ದಾನಲ್ಲ ಅಂತ ಯಾರಿಗೂ ತಡ್ಕಳಾಕೆ ಆಗಾಕಿಲ್ವೇನೊ, ಏನಾದ್ರೂ ಕಿತಾಪತಿ ಮಾಡ್ತಾನೆ ಇರ್ತಾವೆ' ಹಾಗೆಂದವಳೆ ಮಗನತ್ತ ತಿರುಗಿ, 'ಏಯ್ ಮೂದೇವಿ, ನಿಂಗ್ಯಾಕ್ಲಾ ಇಂತ ಐಲಾಟ, ನೀನು ಗಂಡ್ಸು ಕಣ್ಲಾ. ಬಳೆ, ಹುವ್ವ, ಲಂಗ ಅಂತ ಇನ್ನೊಂದು ಕಿತಾ ಹಾಕ್ಕಂಡ್ರೆ ನಿನ್ನಾ ತುಳಿದಾಕಿಬುಡ್ತಿನಿ, ಹೆಣ್ಣಿಗ ನನ್ನ ಮಗನೇ, ಯಾವಾಗಲು ಅಕ್ಕಂದಿರ ಜೊತೇನೆ ಇದ್ದು ಇದ್ದು ಅವರಂಗೆ ಆಡ್ತಿಯಾ, ನೀನು ವುಡಗ ಅನ್ನೋದೆ ನಿಂಗೆ ಮರ್ತೋಗೈತೇನೊ' ಎಂದು ಜೋರಾಗಿ ಬೈಯುತ್ತಾ ವೀರುವನ್ನು ಎಳೆದುಕೊಂಡು ತನ್ನ ಕೋಣೆಯತ್ತ ನಡೆದಾಗ ಎಲ್ಲರೂ ಬೆಪ್ಪಾಗಿ ನಿಂತುಬಿಟ್ಟರು.

ಶಾಂಭವಿಗೆ ಕೋಪ ತಡ್ಯೋಕೆ ಆಗ್ಲಿಲ್ಲ. ಮೇನಕನ್ನ ಎಳೆದುಕೊಂಡು ಬೆನ್ನಿಗೆ ದಬಾ ದಬಾ ಅಂತ ಗುದ್ದುತ್ತಾ, 'ನಿಂಗ್ಯಾಕೆ ಬೇಕಿತ್ತು ಇದೆಲ್ಲಾ, ನೀವು ಹೆಣ್ಣುಮಕ್ಳು ಕಣ್ರೆ, ಈ ಮನೇಲೆ ನಾಯಿ ತರಾ ಬಿದ್ದಿರ್ಬೇಕು. ನಿಮ್ಗೆ ಈ ಮನೇಲಿ ಯಾವ ಅಧಿಕಾರನೂ ಇಲ್ಲ, ಈ ಮನೆಗೊಬ್ಬ ವಂಸೋದ್ಧಾರಕ ವುಟ್ಟುಬುಟ್ಟಿದ್ದಾನಲ್ಲ, ಅದಕ್ಕೆ ನೀವು ಅವರೇಳ್ದಂಗೆ ಕೇಳ್ಕಂಡು ಬಿದ್ದಿರಬೇಕು. ನೀನೇನು ಮಾಡಿದ್ರೂ ತೆಪ್ಪೆ, ಕಣ್ರೆ ತೆಪ್ಪು' ಎಂದು ಅಳುತ್ತಲೇ ಮಗಳಿಗೆ ಹೊಡೆಯುತ್ತಿರುವುದನ್ನು ನೋಡಿ ಸಹಿಸದ ಜಗದೀಶರು, 'ಶಾಂಭ, ಅ ಮಗಿಗ್ಯಾಕೆ ಅಂಗೆ ವೊಡಿತಿದೀಯಾ, ನೀ ಏನು ಮನಸ್ಸಳ, ರಾಕ್ಷಸಿಯೋ, ಬಿಡೇ ಅವ್ಳನ್ನ' ಎನ್ನುತ್ತಾ ಮಗಳನ್ನು ಶಾಂಭವಿಯ ಕೈಯಿಂದ ಬಿಡಿಸಿಕೊಂಡರು.

ಮಾದೇವನಿಗೆ ಹೆಂಡತಿ ಮ್ಯಾಲೆ ಕೋಪವುಕ್ಕಿ ಬಂದಿತ್ತು. ಸಣ್ಣ ವಿಚಾರನಾ ದೊಡ್ಡು ಮಾಡಿ ಮನೇನೆ ಹತ್ತಿ ಉರಿಯೊಂಗೆ ಮಾಡ್ತಾ ವಾರಿಜಳನ್ನ ಅಲ್ಲೇ ಕೊಂದಾಕಿ ಬಿಡುವಷ್ಟು ಸಿಟ್ಟು ನೆತ್ತಿಗೇರಿದ್ರೂ ಅಂಗೆ ಮಾಡಲಾರದೆ ತನ್ನ ಅಸಹಾಯಕತೆಗೆ ತಾನೆ ಮರುಗುತ್ತಾ, ಅವಳಿಗೆ ಬುದ್ಧಿ ಕಲಿಸಲು ನಾಲ್ಕು ಒದೇನಾದ್ರೂ ಬಿಡಬೇಕು ಅನ್ನಿಸಿ ಸೆಟೆದು ನಿಂತುಕೊಂಡ. ಆದ್ರೆ ಅಂಗೇನಾದ್ರು ಮಾಡಿದ್ರೆ ವಾರಿಜ ಮುನಿಸಿಕೊಂಡು ಮಕ್ಕನ್ನ ಕರಕೊಂಡು ತೌರು ಮನೆಗೆ ಹೋಗಿಬಿಡುವ ಚಾಳಿ ಗೊತ್ತಿದ್ದ ಮಾದೇವ ಸುಮ್ಮನಾಗಿ ಬಿಟ್ಟ. ಅಳುತ್ತಿದ್ದ ಅತ್ತಿಗೆಯನ್ನು ನೋಡಲಾರದೆ 'ಅತ್ತಿಗೆ, ಅವ್ಳ ವಿಸಯ ನಿಮ್ಗೆ ಗೊತ್ತಿಲ್ವಾ, ನೀವ್ಯಾಕೆ ನೊಂದ್ಕೊತೀರಾ, ಅವಳ್ದು ನಾಯಿ ಬುದ್ಧಿ, ಮಗಾ ವುಟ್ಟಿದ್ಮ್ಯಾಲೆ ಅವಳ ವೊಗರು ಎಚ್ಚಾಗೈತೆ, ಸೀಮೆಗಿಲ್ಲದ ಮಗನ್ನಾ ಎತ್ತಿದ್ದಾಳಾ, ನೀವು ಸುಮ್ಕಿರಿ ಅತ್ಗೆ, ಅವಳ್ಮಾಡ್ದ ತಪ್ಗಾ ವೊಟ್ಟಗಾಕಳಿ. ಮಕ್ಕಳು ಮಾಡೋದ್ನಾ ದೊಡ್ಡೋ ಮಾಡ್ಬಿಟ್ಟಳು... ಅಂಗಲ್ಲ ಇಂಗೆ ಅಂತ ಅವ್ಕೆ ಯೋಳ್ಕೊಟ್ಟರೆ ಅವು ತಿಳ್ಕೊಳಾಕಿಲ್ವಾ, ನಾನು ಏಳ್ತೀನಿ ಬುಡಿ ಅತ್ಗೆ... ಅಣ್ಣ ನೀನು ಸುಮ್ಕಿರು, ಅತ್ಗೆಗೆ ಏನೂ ಬೈಬೇಡ... ಹೋಗಿ ಮಕ್ಳಾ ನೀವು ಆಚೆಗೋಗಿ ಆಡ್ಕೊ ಓಗಿ' ಅಂತ ಪರಿಸ್ಥಿತೀನ ತಿಳಿಗೊಳಿಸೋಕೆ ನೋಡಿದ.

ಅಳುತ್ತಲೇ ಇದ್ದ ಶಾಂಭವಿ 'ನೋಡ್ದಾ ಮಾದು, ನಿಂಗೆ ಗಂಡ್ಮಗ ಇರೋದು ನಂಗೆ ಆಗಾಕಿಲ್ಲ ಅನ್ನಂಗೆ ನಿನ್ನೆಣ್ತಿ ಮಾತಾಡ್ಬುಟ್ಲಲ್ಲ. ವೀರೂ ನಂಗೂ ಮಗಾ ಅಲ್ವಾ, ಯಾವತ್ತಾದ್ರೂ ನಾನು ನಿನ್ನ ಮಕ್ಳು, ನನ್ನ ಮಕ್ಳು ಅಂತ ಭೇದ ಮಾಡೀದಿನಾ.... ಎಲ್ರೂ ಈ ಮನೇ ಮಕ್ಳೇ ಅಲ್ವಾ... ಎಂಗೆ ಇದ್ನೆಲ್ಲ ಸಯ್ಸಕಂಡ್ ಇರೋದು ಮಾದು' ಎಂದು ಮೈದುನಂಗೆ ಹೇಳಿದಳು.

ಅತ್ತಿಗೆಯ ಕಣ್ಣೀರು ಅವನಲ್ಲಿ ತಲ್ಲಣ ಹುಟ್ಟಿಸಿತು. 'ಅತ್ಗೆ, ಅವ್ಳ ಪರ್ವಾಗಿ ನಾನು ನಿಮ್ಮತ್ರ ಕ್ಷಮೆ ಕೇಳ್ತಿನಿ, ಅವ್ಳ ತೆಪ್ಪನ್ನ ವೊಟ್ಗೆ ಆಕಂಡು ಕ್ಷಮ್ಸಿ ಬುಡಿ ಅತ್ಗೆ. ನೀವ್ಮಾತ್ರ ಕಣ್ಣೀರಾಕ್ಬೇಡಿ, ನಂಗೆ ತಡ್ಕೊಳಾಕಾಗಾಕಿಲ್ಲ, ಈ ಮನೆಗೆ ಅವ್ವ ಇದ್ದಂಗೆ ನೀವು, ನೀವು ನೊಂದ್ಕಂಡ್ರೆ ಈ ಮನ್ಯಾಗೆ ಯಾರ್ಗೂ ಸುಖ ಇರಾಕಿಲ್ಲ ಅತ್ಗೆ' ಎಂದು ಆರ್ತನಾಗಿ ಮಾದೇವ ಹೇಳಿದ. ಅವನ ಮಾತು ಕೇಳಿ ಶಾಂಭವಿಯ ದುಃಖ ಮತ್ತಷ್ಟು ಹೆಚ್ಚಾಯಿತು. ಏನೋ ಆಗಿಹೋದ ಹಾಗೆ ಹೆಂಡತಿ ದುಃಖಿಸುತ್ತಿರುವುದು ಜಗದೀಶರಿಗೆ ಸರಿ ಕಾಣಲಿಲ್ಲ.

'ಶಾಂಭ, ಏನಾಗೋಯ್ತು ಅಂತ ಈಟೊಂದು ಅಳ್ತಾ ಇದ್ದೀಯಾ, ಮಾದು ಏನನ್ನತಾನೆ ಅನ್ನೊ ಯೋಚ್ನೆನೂ ಇಲ್ವಾ, ವಾರಿಜಳಿಗಂತು ಏನೂ ತಿಳ್ಯಾಕಿಲ್ಲ, ನಿಂಗೂ ತಿಳ್ಯಾಕಿಲ್ವಾ, ಮಕ್ಕಳು ಏನಂದ್ಕತರೆ, ಅಕ್ಕ ಎಲ್ಲು ದಿನ ಸಂತೋಷವಾಗಿ ಇದ್ದು ವೋಗೋನ ಅಂತ ಬಂದವ್ರೆ. ಮನೆಗೆ ಬಂದವ್ರು ಇದನ್ನೆಲ್ಲಾ ನೋಡ್ಕಂಡು ಏನ್ ತಿಳ್ಕಳಾಕಿಲ್ಲ, ಯಾವಾಗ ನಿಂಗೆ ಬುದ್ಧಿ ಬತ್ತದೊ, ವೋಗು ವಳಗೆ ಅದೇನು ಕೇಮೆ ಐತೋ ಮಾಡೋಗು' ಎಂದು ರೇಗುವ ಧ್ವನಿಯಲ್ಲಿ ಹೇಳಿದಾಗ, ಶಾಂಭವಿಗೆ ಅತ್ತಿಗೆ, ಮೈದುನ, ಮಕ್ಕಳ ಮುಂದೆ ತನ್ನ ತಪ್ಪೇನು ಇಲ್ಲದಿದ್ದರೂ ತನ್ನನ್ನೇ ದೂರುವಂತೆ ಗಂಡ ಹೇಳಿ ರೇಗಿದಾಗ ರೋಷವುಕ್ಕಿ ಬಂತು. ತನ್ನದೇನು ತಪ್ಪೈತೆ ಇದ್ರಾಗೆ, ನಾನಾದರೂ ಏನು ಮಾಡಿದೆ, ಮಕ್ಕಳ ವಿಷಯಕ್ಕೆ ವಾರಿಜಳೆ ತಾನೇ ಬಂದಿದ್ದು, ಬಂದಿದ್ದು ಅಲ್ಲದೆ ಸಣ್ಣ ವಿಚಾರನ ಅಷ್ಟು ದೊಡ್ಡದು ಮಾಡಿದ್ದು ಅವಳೆ ತಾನೇ, ಈಗ ಗಂಡ ಅಪ್ಪಿಗೇನು ಅನ್ನದೇ ತನ್ನೊಬ್ಬಳಿಗೆ ಮಾತ್ರ ರೇಗುತ್ತಿದ್ದಾರಲ್ಲ, ಇದು ಸರಿನಾ? ನಾನು ಇನ್ನು ಅದೆಷ್ಟು ದಿನ ಈ ರೀತಿ ನೆಮ್ಮದಿ ಇಲ್ಲದಂತೆ ಇರುವುದು, ನನಗೂ ಸಾಕಾಗಿ ಹೋಗಿದೆ, ಇವ್ರು ಇಂಗೆ ಆಡ್ತಾ ಇದ್ರೆ ನಾನೂ ಅಪ್ಪನ್ನನೆ ನೋಡ್ಕಬೇಕಾಗ್ತೈತೆ ಅಂತ ಮನಸ್ಸಿನಲ್ಲಿ ಅಂದುಕೊಂಡು, ಈಗ ಎಲ್ಲರೆದುರು ರಂಪ ಮಾಡುವುದು ಬೇಡ ಅಂತ ವಿವೇಕ ತಂದುಕೊಂಡು ಮುಖ ದುಮ್ಮಿಸಿಕೊಂಡೇ ಒಳನಡೆದಳು.

ಯಾರಿಗೂ ಏನೂ ಹೇಳಲಾರದ ಸ್ಥಿತಿಯಲ್ಲಿದ್ದ ಅಂಬಿಕಾ, ನಾದಿನಿಯರಿಬ್ಬರು ಅಲ್ಲಿಲ್ಲ ಅಂತ ದೃಢಪಡಿಸಿಕೊಂಡು, ನಿಧಾನವಾಗಿ ಮಾದು ಕಡೆ ನೋಡಿ, 'ನೋಡಿದ್ಯಾ ಮಾದು, ಮನೆ ಪರಿಸ್ಥಿತಿ ಎಂಗೈತೆ ಅಂತ ಗೊತ್ತಾಯ್ತಾ? ಇನ್ನೂ ಮೊದ್ಲಂಗೆ ಇರ್ಬೇಕು ಅಂತೀಯಾ? ಮನೆ ಎಂಗಸ್ರಿಗೂ ಒಂದೇ ಮನ್ಯಾಗೆ ಇರಾದು ಬೇಕಾಗಿಲ್ಲ, ದಿನಾ ಇಂಗಾಡ್ಕೊಂಡು ಇರಾಕ್ತಾದಾ ಮಾದು. ಯಾರ್ಗೂ ನೆಮ್ದಿ ಇಲ್ಲ... ಮಕ್ಳು ಇಂಗೆ ಬೆಳಿಬ್ಯಾಕಾ? ಸುಮ್ಕೆ ಜಗ ಹೇಳಾದ್ನ ಕೇಳ್ಕಂಡು ಬೇರೆ ವಲೆ ಹೂಡ್ಕಳಿ. ವಲೆ ಮಾತ್ರ ಬ್ಯಾರೆ ಬ್ಯಾರೆ, ವ್ಯವಾರ ಒಂದೇನೇ ಮಾಡ್ಕಳಿ, ಗೊತ್ತಾತಾ... ಒಟ್ಟಿಗೆ ಇದ್ದು ದಿನಾ ಕುದಿಯಾಕಿಂತ ಬ್ಯಾರೆ ಬ್ಯಾರೆ ಇದ್ದು ವೈವಾಗಿರೋದ್ನ ನೋಡ್ಕಳಿ. ನಾನು ಈ ಮನೆ ಹಿರೀಕಳಾಗಿ ಹೇಳ್ತಾ ಇವ್ನಿ. ನಾನು ಹೇಳೋದ್ನ ಕೇಳಿ' ಎಂದು ಕಡ್ಡಿ ತುಂಡಾಗುವಂತೆ ಹೇಳಿ ತಮ್ಮನ ಮನವೊಲಿಸಲು ನೋಡಿದರು.

ಮನೆಯ ಈ ಸನ್ನಿವೇಶದಿಂದ ನೊಂದುಕೊಂಡು ಕುಳಿತಿದ್ದನ್ನು, ಅತ್ತಿಗೆ ಕಣ್ಣೀರು ಹಾಕಿದ್ದು, ಮಕ್ಕಳೆಲ್ಲಾ ಬೆದರಿ ಮೂಕರಾಗಿದ್ದು, ವಾರಿಜ ಅಂಗಾಡಿದ್ದು ಇವೆಲ್ಲವನ್ನು ನೋಡಿ ಮಾದುಗೂ ಅಕ್ಕ ಹೇಳ್ತಾ ಇರೋದು ಆ ಕ್ಷಣಕ್ಕೆ ಸರಿ ಎನಿಸಿತು. ತನ್ನ ನಿರ್ಧಾರದಿಂದ ಅಣ್ಣನಿಗೂ ನೆಮ್ಮದಿಯಿಲ್ಲ, ಅಣ್ಣ ಅಕ್ಕ ಹೇಳಿದಂತಾಗಲಿ, ನಾವೇನು ದೂರ ಹೋಗ್ತೀವಾ, ಒಂದೇ ಸೂರು ತಾನೇ, ಒಲೆ ಎರಡಾದರೇನು, ವ್ಯವಾರ ಒಂದೇ ತಾನೇ, ಅಲ್ಲಾದರೂ ನಾವ್ರು ಒಟ್ಟಿಗೆ ಇರ್ತೀವಲ್ಲ ಅಂತ ಆಲೋಚನೆ ಮಾಡಿ, 'ಸರಿ ಕಣಕ್ಕ, ನೀ ಏಳ್ದಂಗೆ ಆಗ್ಲಿ. ಆಮೇಕಾದರೂ ಎಲ್ಲರು ವೈವಾಗಿರ್ತಾರಾ ನೋಡಣ' ಅಂತ ಸೋತ ಧ್ವನಿಯಲ್ಲಿ ಉಸುರಿ ಅಲ್ಲಿಂದ ಕಾಲು ಎಳೆದುಕೊಂಡು ಹೊರನಡೆದ.

ಜಗದೀಶರು, ಅಂಬಿಕಾ ಸಮಾಧಾನದಿಂದ ಒಬ್ಬರ ಮುಖವನ್ನು ಒಬ್ಬರು ನೋಡಿಕೊಂಡರು. ಮಾದು ಅಷ್ಟು ಸುಲಭವಾಗಿ ಒಪ್ಪಿದ್ದು ಇಬ್ಬರಿಗೂ ನಿರಾಳವೆನಿಸಿತು. ಹೇಗೊ ಈ ಘಟನೆಯಿಂದಲಾದರೂ ಮನೆಯ ಉರಿ ಕೆಂಡ ಮಾದುವನ್ನು, ಅವನ ನಿರ್ಧಾರವನ್ನು ಬದಲಿಸುವಂತೆ ಮಾಡಿದ್ದು ನೆಮ್ಮದಿ ತರಿಸಿತ್ತು.

ಮಾರನೇ ದಿನವೇ ಮನೆಗೆ ಗೋಡೆ ಕಟ್ಟುವ ಕೆಲಸ ಪ್ರಾರಂಭವಾಯಿತು. ಮೊದಲೇ ಮುಂದಾಲೋಚನೆಯಿಂದ ಎರಡು ಮನೆಗೆ ಏನೇನು ಬೇಕು ಅದನ್ನು ಕಟ್ಟಿಸಿದ್ರಿಂದ ಮತ್ತೇನೂ ಕಟ್ಟುವ ಕೆಲಸವಿರಲಿಲ್ಲ. ಹಾಗಾಗಿ ಗೋಡೆ ಬೇಗ ಎದ್ದುಬಿಟ್ಟಿತು. ಮನೆಗೆ ಬಣ್ಣ ಹೊಡಿಸಿ ಒಂದು ಒಳ್ಳೆ ದಿನ ನೋಡಿಕೊಂಡು ಮಾದುವಿನ ಮನೆಯಲ್ಲಿ ಹಾಲು ಉಕ್ಕಿಸಿದರು. ಅಣ್ಣ ತಮ್ಮಂದಿರ ಮನದಲ್ಲಿ ವಿಷಾದದ ಛಾಯೆ ತುಂಬಿಕೊಂಡು ಆ ಸಡಗರದ ದಿನ ಮಂಕಾಗಿದ್ರೂ, ಶಾಂಭವಿ–ವಾರಿಜ ಮಾತ್ರ ಸಂಭ್ರಮದಲ್ಲಿದ್ದರು. ಮಕ್ಕಳಿಗೆ ಬೇರೆ ಬೇರೆ ಮನೆ ಅಂತ ಅರ್ಥವಾಗದಿದ್ದರೂ ಎರಡೂ ಮನೆಗಳಲ್ಲೂ ಓಡಾಡುತ್ತಾ ಗುಲ್ಲೆಬ್ಬಿಸುತ್ತಾ ಕೂಗಾಡುತ್ತಿದ್ದರು. ಮೇನಕಳಿಗೆ ಮಾತ್ರ ಸ್ವಲ್ಪ ಅರ್ಥವಾಗಿತ್ತು, ತಾನು ವೀರುಗೆ ಹುಡುಗಿ ಡ್ರೆಸ್ಸು ಮಾಡಿದ್ದಕ್ಕೆ ಅಮ್ಮ, ಚಿಕ್ಕಮ್ಮ ಮುನಿಸಿಕೊಂಡು ಜಗಳವಾಡಿಕೊಂಡಿದ್ದರಿಂದ ಅಪ್ಪ, ಚಿಕ್ಕಪ್ಪನನ್ನು ಬೇರೆಯಾಗುವಂತೆ ಮಾಡಿದೆ ಅಂತ ಅರ್ಥವಾಗಿತ್ತು. ಅದಕ್ಕೆಲ್ಲಾ ತಾನೇ ಕಾರಣವಾಗಿಬಿಟ್ಟೆನಲ್ಲ ಅನ್ನೋ ನೋವು... ತಾನು